**PW2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 23-08-2025**

**ಪಾಟೀ ಸವಾಲುಃ ಶ್ರೀ ಆರ್ ಸಿ ಎಸ್ ಆರೋಪಿ ಪರ ವಕೀಲರಿಂದ**

ಈ ಪ್ರಕರಣದ ಪಿರ್ಯಾದಿ ನನ್ನ ತಂದೆ. ನಾನು ಮತ್ತು ಪಿರ್ಯಾದಿದಾರರು ಒಂದೇ ಮನೆಯಲ್ಲಿ ವಾಸಮಾಡುತ್ತಿದ್ದೇವೆ ಎಂದರೆ ಸರಿ. ನಾನು ಶಿಕ್ಷಕನಾಗಿ ಕೆಲಸಮಾಡುತ್ತಿದ್ದೇನೆ. ಈ ಪ್ರಕರಣದ ಆರೋಪಿ ನನಗೆ ಗೊತ್ತು, ಅವರು ನಮ್ಮ ಊರಿನವರಾಗಿದ್ದು, ಅವರು ನನಗೆ ಪರಿಚಯವಿರುತ್ತಾರೆ. ಆರೋಪಿ ನನ್ನ ತಂದೆಗೆ ಯಾವಾಗ ಹಣ ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ತಂದೆಯು ನನಗೆ ದಿ.10-12-2019 ರಂದು ಆರೋಪಿಗೆ ಹಣ ನೀಡುವುದಕ್ಕೆ ಕಡಿಮೆ ಇದ್ದು ನನಗೆ ಹಣ

ನೀಡುವಂತೆ ಕೇಳಿರುತ್ತಾರೆ. ಆರೋಪಿ ನನಗೆ ಪರಿಚಯವಿದ್ದು, ಆರೋಪಿಗೆ ನಾನು ನಮ್ಮ ತಂದೆಗೆ ಹಣ ಕೇಳಿದ ಬಗ್ಗೆ ವಿಚಾರಿಸಿರುವುದಿಲ್ಲ. ನಾನು ನಮ್ಮ ತಂದೆಗೆ ಆರೋಪಿಯಿಂದ ಯಾವುದಾದರೂ ಪುರಾವೆ ತೆಗೆದುಕೊಂಡು ಹಣ ನೀಡುವಂತೆ ಸಲಹೆ ನೀಡಿರುವುದಿಲ್ಲ. ಪಿರ್ಯಾದಿದಾರರು ನನಗೆ ರೂ.1,50,000/- ಹಣ ಬೇಕು ಎಂದು ಕೇಳಿರುತ್ತಾರೆ. ನಮ್ಮ ತಂದೆಗೆ ಸದರಿ ಹಣವನ್ನು ನಾನು ಸಾಲವಾಗಿ ನೀಡಿರುವುದಿಲ್ಲ. ನಾನು ದಿ.10-02-2019 ರಂದು ನನ್ನ ತಂದಗೆ ರಾತ್ರಿ ಹಣ ನೀಡಿರುತ್ತೇನೆ. ನಾನು ನನ್ನ ತಂದೆಗೆ ಹಣ ನೀಡಿದ ನಂತರ, ನನ್ನ ತಂದೆಯು ಅದನ್ನು ಆರೋಪಿಗೆ ನೀಡಿದ ನಂತರ ಅವರಿಂದ ಪುರಾವೆ ಪಡೆದ ಬಗ್ಗೆ ನಮ್ಮ ತಂದೆಯನ್ನು ನಾನು ಕೇಳಿರುವುದಿಲ್ಲ. ನನ್ನ ತಂದೆಯು ಮತ್ತು ಆರೋಪಿ ವ್ಯವಹಾರ ಮಾಡಿದ್ದು, ಆದ್ದರಿಂದ ನನ್ನ ತಂದೆಯು ಹಣ ಕೇಳಿದಕ್ಕೆ ನಮ್ಮ ತಂದೆಗೆ ಹಣ ನೀಡಿರುತ್ತೇನೆ. ನಾನು ನನ್ನ ತಂದೆಗೆ ದಿ.11-12-2019 ರಂದು ರಾತ್ರಿ 8.30 ಗಂಟೆಯ ನಂತರ ಆರೋಪಿಗೆ ಹಣ ನೀಡಿದ ಬಗ್ಗೆ ಕೇಳಿರುತ್ತೇನೆ. ನಾನು ನನ್ನ ಬ್ಯಾಂಕ್ ಖಾತೆಯಿಂದ ರೂ.3,00,000/- ಹಣ ಡ್ರಾ ಮಾಡಿಕೊಂಡು ನನ್ನ ತಂದೆ ಕೈಗೆ ಕೊಟ್ಟಿರುತ್ತೇನೆ. ಆರೋಪಿ ನನ್ನ ತಂದೆಗೆ ಯಾವುದೇ ಹಣ ಕೊಡುವುದು ಇರದೇ ಇದ್ದರೂ ಸಹ ನಮ್ಮ ತಂದಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ರಲ್ಲಿ ತೋರಿಸಿದ ಹಣಕ್ಕೂ ಮತ್ತು ನನ್ನ ತಂದೆ ಹಾಗೂ ಆರೋಪಿ ನಡುವಿನ ವ್ಯವಹಾರಕ್ಕೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಈ ಪ್ರಕರಣವನ್ನು ದಾಖಲು ಮಾಡಿ ಕೆಲವು ವರ್ಷಗಳ ನಂತರ ನನಗೆ ಈ ಪ್ರಕರಣದ ಬಗ್ಗೆ ತಿಳಿದಿರುತ್ತದೆ. ಆರೋಪಿ ನನ್ನ ತಂದೆಯ ವಿರುದ್ದ ಪ್ರಕರಣ ದಾಖಲಿಸಿದ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ನನಗಗಾಲೀ ನನ್ನ ತಂದೆಗಾಗಲೀ ಯಾವುದೇ ಹಣ ನೀಡುವುದು ಇರುವುದಿಲ್ಲ, ಬದಲಾಗಿ ನನ್ನ ತಂದೆಯವರೇ ಆರೋಪಿಗೆ ಹಣ ನೀಡಬೇಕು ಎಂದರೆ ಸರಿಯಲ್ಲ. ನನ್ನ ತಂದೆಯು ಆರೋಪಿಗೆ ಹಣ ನೀಡುವುದರಿಂದ ತಪ್ಪಿ ಸಿಕೊಳ್ಳುವ ಸಲುವಾಗಿ ನನ್ನ ತಂದೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.